# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಅನುಸರಿಸ ಬೇಕಾದ ಮಾರ್ಗಸೂಚಿಗಳು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಸಕಇ 36 ಬಿಸಿಎ 2012 ದಿ:12-4-2012.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:12-4-2012ರ ಆದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಡಾ!!ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಮಾರ್ಗ ಸೂಚನೆಗಳನ್ನು ನೀಡಿ ಆದೇಶಿಸಲಾಗಿದೆ.

ಮೇಲ್ಕಂಡ ನಿಗಮಗಳಿಂದ ಜಾರಿಗೊಳಿಸುತ್ತಿರುವ ಗಂಗಾ ಕಲ್ಯಾಣ ಮುಂದುವರೆದ ಯೋಜನೆಯನ್ನು ಸುಲಭವಾಗಿ ವಿಳಂಬ ವಿಲ್ಲದೆ ಅನುಷ್ಠಾನಗೊಳಿಸುವುದರಲ್ಲಿ ಕೆಲವೊಂದು ಅಡಚಣೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಅವುಗಳ ನಿವಾರಣೆಗಾಗಿ ಮಾರ್ಗಸೂಚಿನೆಗಳನ್ನು ತಯಾರಿಸಿ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

## ಸರ್ಕಾರದ ಆದೇಶ ಸಂಖ್ಯೆ ಸಕಇ 36 ಬಿಸಿಎ 2012 ದಿನಾಂಕ:29-8-2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಡಾ!!ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯನ್ನು ಸುಲಭವಾಗಿ ವಿಳಂಬವಿಲ್ಲದೆ ಜಾರಿಗೊಳಿಸಲು ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗ ಸೂಚಿಗಳ ಅನುಸಾರ ಕಟ್ಟು ನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಂಜುಂಡಪ್ಪ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ
ಒಳಬಂದ ಸಂ 5643
04 SEP 2012
ಕೇಂದ್ರ ಕಚೇರಿ,
ಬೆಂಗಳೂರು-1.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಗಳು:-

1) ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ...

MD-1113
04/09/12

4) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

5) ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು.

7) ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು.

8) ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಸಮಾಜ ಕಲ್ಯಾಣ / ಪರಿಶಿಷ್ಟ ವರ್ಗಗಳ / ಹಿಂದುಳಿದ ವರ್ಗಗಳ ಅಧಿಕಾರಿಗಳು ( ವ್ಯವಸ್ಥಾಪಕ ನಿರ್ದೇಶಕರುಗಳ ಮುಖಾಂತರ)

9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತಕಾರ್ಯದರ್ಶಿ ಬೆಂಗಳೂರು.

10) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು.

11) ಸರ್ಕಾರದ ಉಪಕಾರ್ಯದರ್ಶಿ 1-2 ಸಮಾಜ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು ಬೆಂಗಳೂರು.

12) ಶಾಖಾ ರಕ್ಷಾ ಕಡತ.

13) ಹೆಚ್ಚುವರಿ ಪ್ರತಿ.

# ಅನುಬಂಧ

## ಗಂಗಾ ಕಲ್ಯಾಣ ಯೋಜನೆಯಡಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ

## ಮಾರ್ಗ ಸೂಚಿಗಳು:

1. ಆಯ್ಕೆ ವಿಧಾನದ ಬಗ್ಗೆ ಈಗಾಗಲೇ ನೀಡಿದ ಸರ್ಕಾರಿ ಆದೇಶ ಸಂಖ್ಯೆ ಸಕಇ 36 ಬಿಸಿಎ 2012 ದಿನಾಂಕ 12.04.2012 ನ್ನು ಚಾಚೂತಪ್ಪದೆ ಪಾಲಿಸತಕ್ಕದ್ದು.
2. ಆಯ್ಕೆಗಾದ ಫಲಾಪೇಕ್ಷಿಗಳ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಬಗ್ಗೆ ನಿಗಮದ ಅಧಿಕಾರಿಗಳು ವರದಿ ತಯಾರಿಸಿಕೊಳ್ಳಬೇಕು. (ನಮೂನೆ-1 ಲಗತ್ತಿಸಿದೆ)
3. ಅರ್ಹರೆಂದು ಕಂಡುಬಂದ ಎಲ್ಲಾ ಫಲಾಪೇಕ್ಷಿಗಳ ಪಟ್ಟಿಯನ್ನು ನಿಗಧಿಪಡಿಸಿದ ಗುತ್ತಿಗೆದಾರರಿಗೆ ನೀಡಿ, ಭೂಭೌತ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ತಿಳಿಸುವುದು.
4. ಸಫಲ ಜಲಬಿಂಧು ದೊರೆತ ಪ್ರಕರಣಗಳಲ್ಲಿ ಕೊಳವೆಬಾವಿಮಂಜೂರಾತಿ ಪತ್ರವನ್ನು ಫಲಾಪೇಕ್ಷಿಗಳಿಗೆ ಕಳುಹಿಸಿ, ಕೆಳಕಂಡ ದಾಖಲಾತಿಯನ್ನು **ಅವಧಿಸಾಲ ಮಂಜೂರಾತಿಗಾಗಿ** ಸಲ್ಲಿಸಲು ತಿಳಿಸುವುದು (ಮಂಜೂರಾತಿ ಪತ್ರದ ಪ್ರತಿ ಲಗತ್ತಿಸಿದೆ. ನಮೂನೆ-1 (ಅ)
    1. ರೂ. 20/- ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ (ನಮೂನೆ-1 (ಆ)
    2. ಪ್ರೋನೋಟ್ (ರೂ. 20/-ರ ಛಾಪಾ ಕಾಗದದಲ್ಲಿ)
    3. ಕನ್ಸಿಡರೇಷನ್ ರಸೀದಿ (ರೂ. 20/-ರ ಛಾಪಾ ಕಾಗದದಲ್ಲಿ)
    4. ಲೋನ್ ಅಗ್ರಿಮೆಂಟ್ (ರೂ. 50/-ರ ಛಾಪಾ ಕಾಗದದಲ್ಲಿ)
5. ಜಮೀನಿನ ಮೇಲೆ ಬೋಜಾ ದಾಖಲಿಸಲು ನೀಡಿರುವ ಒಪ್ಪಿಗೆ ಪತ್ರವನ್ನು ಸಂಬಂಧಪಟ್ಟ ತಹಶಿಲ್ದಾರ್ ಕಛೇರಿಗೆ ನಮೂನೆ-1(ಇ) ನಂತೆ ಕಳುಹಿಸಿ ತಲುಪಿದ ಬಗ್ಗೆ ಸ್ವೀಕೃತಿ ಪಡೆಯಬೇಕು ಮತ್ತು ನಿಗಮದ ಬೋಜಾ ದಾಖಲಾಗಿರುವ ಪಹಣಿ ಪತ್ರಿಕೆಯನ್ನು ತರಿಸಿ ಕಡತದಲ್ಲಿ ಜೋಡಿಸಿಕೊಳ್ಳುವುದು.
6. ನಿಗಮದ ಪರವಾಗಿ ಭೂದಾಖಲೆಗಳಲ್ಲಿ ಭೋಜಾ ಕೂಡಿಸಿದ ನಂತರ ಭೂಭೌತ ಸಮೀಕ್ಷೆಯ ವರದಿ ಆಧಾರದಲ್ಲಿ ಕೊಳವೆಬಾವಿ ಕೊರೆಯುವಂತೆ ಕಾರ್ಯಾದೇಶ ನೀಡುವುದು. ಇದರಿಂದ ಮುಂದಿನ ಕ್ರಮಗಳಾದ ಪಂಪ್ ಸಪ್ಲೈ ಇತ್ಯಾದಿ ಬಗ್ಗೆ ಆಗುತ್ತಿರುವ ವಿಳಂಬವನ್ನು ತಡೆಯಬಹುದಾಗಿದೆ. (ಕಾರ್ಯಾದೇಶದ ಪ್ರತಿ ನಮೂನೆ-2 ಲಗತ್ತಿಸಿದೆ).
7. ಕೊಳವೆಬಾವಿ ಕೊರೆಯುವ ಸಮಯದಲ್ಲಿ ನಿಗಮದ ತಾ.ಅ.ಅ./ಸಿಬ್ಬಂದಿ/ ಫಲಾನುಭವಿ ಹಾಜರಿದ್ದು ಕೊಳವೆಬಾವಿ ಕೊರೆದ ವಿವರಗಳನ್ನು ನಮೂನೆ-3ರಲ್ಲಿ ನಿಖರವಾಗಿ ದಾಖಲಿಸಿಕೊಳ್ಳಬೇಕು. (ನಮೂನೆ-3 ಲಗತ್ತಿಸಿದೆ) ಉಪಯೋಗಿಸಿದ ಕೇಸಿಂಗ್ ಪೈಪ್ ನಿಗದಿಪಡಿಸಿದ ದಪ್ಪದ / ವಿಶಿಷ್ಟತೆಗೆ ಅನುಗುಣವಾಗಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಒಂದುವೇಳೆ, ವಿಶಿಷ್ಟತೆಗೆ ಅನುಗುಣವಾಗಿ ಇಲ್ಲದೇ ಇದ್ದಲ್ಲಿ ಅದನ್ನು ತಕ್ಷಣವೇ ಸಂಬಂಧಿಸಿದ ದಾಖಲಾತಿಗಳಲ್ಲಿ ನಮೂದಿಸುವುದು. ಕೊರೆಯುವಾಗ ನಿಗಧಿತ 1000 ಜಿ.ಪಿ.ಹೆಚ್.ಗಿಂತ ಹೆಚ್ಚಿನ